ಹಾಗಿಲ್ಲ. ಅವರು ತಾಕತ್ತು ಬಗ್ಗೆ ಕೇಳಿದರೆ ಮಂತ್ರಿಗಳು ತಾಕತ್ತು ಬಗ್ಗೆ ಹೇಳುತ್ತಾರೆ. ಎಲ್ಲ ಸದಸ್ಯರಿಗೂ ಹೇಳಬೇಕೇನು? (ಗೊಂದಲ) ದಯವಿಟ್ಟು ಕುಳಿತುಕೊಳ್ಳಿ. ಬೆಳಿಗ್ಗೆಯಿಂದ ಇದೇ ಆಯಿತು. (ಗೊಂದಲ) ಒಂದೊಂದು ಶಬ್ಧಕ್ಕೂ ಎದ್ದು ನಿಲ್ಲುತ್ತೀರಿ.

263 ಶ್ರೀ ಪ್ರಕಾಶ್ ಹೆಚ್.ಎಸ್.

ಮಾನ್ಯ ಸಾರಿಗೆ ಸಚಿವರು.

ಅ) ಹಾಸನ ನಗರ ಮತ್ತು ಹೊಳೆನರಸೀಪುರ ಮಾರ್ಗದ ಚನ್ನಪಟ್ಟಣ ಬಳಿ ಹೊಸ ಹೈಟೆಕ್ ಬಸ್‌ನಿಲ್ದಾಣದ ಕಾಮಗಾರಿಯನ್ನು ಪ್ರಾರಂಭ ಮಾಡಿದ್ದು ಯಾವಾಗ; ಈ ಕಾಮಗಾರಿಯನ್ನು ಮುಕ್ತಾಯ ಗೊಳಿಸುವುದು ಯಾವಾಗ; ಇದಕ್ಕಾಗಿ ಮೀಸಲಿಟ್ಟ ಅಂದಾಜು ವೆಚ್ಚವೆಷ್ಟು ಹಾಗೂ ಈಗಾಗಲೇ ಖರ್ಚು ಮಾಡಿರುವ ಹಣವೆಷ್ಟು;

3.5.2007.

ಮೇ–2009 (ಟೆಂಡರ್ ಕರಾರಿನಂತೆ ದಿನಾಂಕ: 2.11.08ರಂದು ಮುಕ್ತಾಯಗೊಳಿಸಬೇಕಾಗಿತ್ತು) ಅನುಮೋದನೆಯಾದ ಮೊತ್ತವು 2633.50ಲಕ್ಷ ರೂ.ಗಳಾಗಿರುತ್ತದೆ.

ಇಲ್ಲಿಯವರೆಗೆ 2037.00ಲಕ್ಷ ರೂ.ಗಳನ್ನು ಯೋಜನೆಗಾಗಿ ವೆಚ್ಚ ಮಾಡಲಾಗಿದೆ.

ಆ) ಸಾರ್ವಜನಿಕರ ಉಪಯೋಗಕ್ಕೆ ಬಸ್ ನಿಲ್ದಾಣವನ್ನು ಮುಕ್ತಗೊಳಿಸುವುದು ಯಾವಾಗ ಹಾಗೂ ಪ್ರತಿನಿತ್ಯವೂ ಬಂದು ಹೋಗುವ ಸರ್ಕಾರಿ ಬಸ್ಸುಗಳೆಷ್ಟು; ಮಾಹಿತಿ ನೀಡುವುದು;

2009

2061 ಸರ್ಕಾರಿ ಬಸ್ಸುಗಳು.

ಇ) ಹಾಸನ ಜಿಲ್ಲೆಯ ಆಲೂರಿನಲ್ಲಿ ಬಸ್ ಡಿಪೋ ತೆರೆಯಲು ಸರ್ಕಾರ ಮಂಜೂರಾತಿ ನೀಡಿದೆಯೇ; ಹಾಗಿದ್ದಲ್ಲಿ, ಬಸ್ ಡಿಪೋ ತೆರೆಯಲು ಕೈಗೊಂಡಿರುವ ಕ್ರಮಗಳೇನು?

ಇಲ್ಲ.

ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಎಸ್. ಪ್ರಕಾಶ್: ಹಾಸನದಲ್ಲಿ ಈ ಕಾಮಗಾರಿಗೆ 26 ಕೋಟಿ 33 ಲಕ್ಷ ರೂ.ಗಳ ಅನುಮೋದನೆ ಆಗಿದ್ದು ಕೆಲಸ ಪ್ರಾರಂಭವಾಗಿದೆ.

ಇಲ್ಲಿಯವರೆಗೆ 20 ಕೋಟಿ 37 ಲಕ್ಷ ರೂ.ಗಳ ಖರ್ಚಾಗಿದೆ. ಅದು 2008ರಲ್ಲಿ ಮುಕ್ತಾಯವಾಗಬೇಕಾಗಿತ್ತು. ಆದರೆ, ಇಲ್ಲಿಯವರೆಗೂ ಮುಕ್ತಾಯವಾಗಿಲ್ಲ. ಅದಕ್ಕೆ, ದಯವಿಟ್ಟು ಸಚಿವರು ಉದ್ಘಾಟನೆ ಮಾಡದಿದ್ದರೂ ಶಂಕುಸ್ಥಾಪನೆಗಾದರೂ ನಮ್ಮ ಜಿಲ್ಲೆಗೆ ಬನ್ನಿ ಎಂದು ತಮ್ಮ ಮೂಲಕ ಅವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಆರ್. ಅಶೋಕ್: ಹಾಸನ ಬಸ್ ನಿಲ್ದಾಣವನ್ನು ಹೈಟೆಕ್ ಬಸ್ ನಿಲ್ದಾಣವಾಗಿ ಮಾಡುತ್ತಿದ್ದೇವೆ. ಒಟ್ಟು 26/ ಕೋಟಿ ರೂ.ಗಳ ಅಂದಾಜು ವೆಚ್ಚ ಇದೆ. ಅದರಲ್ಲಿ 20 ಕೋಟಿ ರೂ.ಗಳನ್ನು ಈಗಾಗಲೇ ಖರ್ಚು ಮಾಡಲಾಗಿದೆ. ಅದಕ್ಕೆ 17 ಎಕರೆ ಜಮೀನು ಬೇಕಾಗಿದೆ. ಹಳೆಯ ಬಸ್ ನಿಲ್ದಾಣದಲ್ಲಿ 12 bus bay ಇತ್ತು. ಈಗ ಒಂದೇ ಸಾರಿಗೆ 85 bus bay ಗಳನ್ನು ಅಲ್ಲಿ ನಾವು ಮಾಡುತ್ತಿದ್ದೇವೆ. 2 ಲಕ್ಷ sq.ft. area ಇದೆ, ಅಂದರೆ ನಮ್ಮ International Airport ನ ಎಷ್ಟು plinth area ಇದೆ almost all ಅಷ್ಟೇ plinth area ಇದೆ. ಕರ್ನಾಟಕದಲ್ಲಿಯೇ ಅತಿ ದೊಡ್ಡದಾದ ಬಸ್ ನಿಲ್ದಾಣ ಇದಾಗುತ್ತದೆ. ಇದರ ಕೆಲಸ ನವೆಂಬರ್ ನಲ್ಲಿ ಮುಗಿಯಬೇಕಾಗಿತ್ತು. ಅದು ಕೆರೆ ಪ್ರದೇಶವಾಗಿರುವುದರಿಂದ ಮಳೆ ಮತ್ತು ನೀರು ಜಾಸ್ತಿ ಇದ್ದುದ್ದರಿಂದ ಸ್ವಲ್ಪ ಮುಂದೂಡಲಾಗಿದೆ. ಇನ್ನು 3 ತಿಂಗಳೊಳಗೆ ಇದನ್ನು ಉದ್ಘಾಟನೆ ಮಾಡುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅದೇ ರೀತಿ ಇಲ್ಲಿ ಸುಮಾರು 1455 ಬಸ್‌ಗಳು ಬರುತ್ತವೆ. ಸುಮಾರು 2061 ಬಂದು ಹೋಗುವ ಬಸ್‌ಗಳು ಇವೆ. Roof ಮತ್ತು painting ಇವೆರಡು ಕೆಲಸಗಳು ಮಾತ್ರ ಬಾಕಿ ಇವೆ. ಇದನ್ನು 3 ತಿಂಗಳೊಳಗೆ complete ಮಾಡುತ್ತೇವೆ. ಆದಷ್ಟು ಶೀಘ್ರವಾಗಿ ಮಾಡುತ್ತೇವೆ. ಏಕೆಂದರೆ, ಬೆಂಗಳೂರಿನಿಂದ ಮಂಗಳೂರಿಗೆ ಹೋಗುವ ಬಹಳಷ್ಟು ಬಸ್‌ಗಳು ಈ route ನಲ್ಲಿಯೇ ಹೋಗುವುದರಿಂದ ಆದಷ್ಟು ಶೀಘ್ರವಾಗಿ ಈ ಬಸ್ ನಿಲ್ದಾಣವನ್ನು ಹಾಸನ ಜನತೆಗೆ ಕೊಡುವುದರಲ್ಲಿ ಯಾವುದೇ ಸಮಸ್ಯೆ ಇಲ್ಲ. ಆದಷ್ಟು ಬೇಗ ಇದನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಆಲೂರು ಕೂಡ taluk head quarter ಆಗಿದೆ. ಈ ಪಟ್ಟಣ ರಾಷ್ಟ್ರೀಯ ಹೆದ್ದಾರಿ 48 ರಲ್ಲಿ ಬರುತ್ತದೆ. ಅಲೂರಿನಿಂದ ಹಾಸನಕ್ಕೆ 20 ಕಿ.ಮೀ. ಆಗುತ್ತದೆ. ಆ ಭಾಗದ ರಸ್ತೆಯ ಮೇಲಿನ ಒತ್ತಡ ತುಂಬಾ ಇದೆ. ಹೀಗಾಗಿ ಅಲ್ಲಿಗೆ ಒಂದು ಡಿಪೋ ಅವಶ್ಯಕತೆ ತುಂಬಾ ಇದೆ. ನಾವು, ತಹಶೀಲ್ದಾರರು ಅಲ್ಲಿ inspection ಮಾಡಿ 4 ಎಕರೆ ಸರ್ಕಾರಿ ಜಾಗ ಕೊಡುವುದು ಎಂದು ಹೇಳಿದ್ದೆವು. ಆದರೆ, ಆಲೂರು ಪಟ್ಟಣದಿಂದ ಆ ಜಾಗಕ್ಕೆ ಎರಡೂ ಕಾಲು ಕಿಲೋ ಮೀಟರ್ ದೂರವಾಗುತ್ತದೆ. ಅಲ್ಲಿ ಬಸ್ ಡಿಪೊ ಮಾಡಿದರೆ ಡೀಸೆಲ್ ಖರ್ಚು ಹೆಚ್ಚು ಬರುತ್ತದೆ, ಅದಕ್ಕೆ ಅಲ್ಲಿಗೆ ಕೊಡುವುದಕ್ಕಾಗುವುದಿಲ್ಲವೆಂದು

ಅಧಿಕಾರಿಗಳು ಕುಂಟುನೆಪ ಹೇಳುತ್ತಿದ್ದಾರೆ. ತಮಗೂ ಅಲ್ಲಿಯೂ ಸಮಸ್ಯೆ ಗೊತ್ತಿದೆ. ಯಾವುದೇ ಪಟ್ಟಣದ head quarter ನಲ್ಲಿ ಖಾಸಗಿ, ಸರ್ಕಾರಿ ಜಾಗ ಇರಬಹುದು, ಎಲ್ಲಿ ಖಾಲಿ ಜಾಗವಿದೆ? ನಾವು ದೂರ ಹೋಗಲೇ ಬೇಕಾಗುತ್ತದೆ. ದಯಮಾಡಿ ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಮಾನ್ಯ ಸಚಿವರು ಆಲೂರಿಗೆ ಹೊಸ bus depot ಮಂಜೂರು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ಅಶೋಕ್: ಆಲೂರು ಬಸ್ ನಿಲ್ದಾಣ ತೆರೆಯಬೇಕೆಂದು ಮಾನ್ಯ ಸದಸ್ಯರು ವಿನಂತಿ ಮಾಡಿದ್ದಾರೆ. ಅಲ್ಲಿ ಜಾಗವನ್ನು ಇನ್ನೂ ನಮಗೆ handover ಮಾಡಿಲ್ಲ. ಅಲ್ಲಿಯ ತಹಶೀಲ್ದಾರ್ ಹತ್ತಿರ ಮತ್ತು D.C. ಹತ್ತಿರ ಮಾತನಾಡಿದ್ದೇನೆ. ಅಲ್ಲಿ 4 ಎಕರೆ ಜಾಗ ಇದೆ ಎಂದು ಹೇಳುತ್ತಾರೆ. ಆ ಜಾಗ ನಮಗೆ hand over ಆದ ತಕ್ಷಣ ಅದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಮಂಜೂರು ಮಾಡುವುದಕ್ಕೆ ನಮಗೇನೂ ಮುಜುಗರವಿಲ್ಲ. ಈಗಾಗಲೇ ಹಾಸನದಲ್ಲಿ ದೊಡ್ಡ ಬಸ್ ನಿಲ್ದಾಣವಾಗುತ್ತಿದೆ. 12 bus bay ಇದ್ದದ್ದನ್ನು 85 bus bay ಗೆ ಏರಿಸುತ್ತಿದ್ದೇವೆ. ಆಲೂರಿನಲ್ಲೂ ಮಾಡುವುದಕ್ಕೆ ನಮಗೇನೂ ಸಮಸ್ಯೆ ಇಲ್ಲ. ಏಕೆಂದರೆ, ಆ route ನಲ್ಲಿ ಸುಮಾರು 4000 trips ಹೋಗುವುದರಿಂದ ಮಾಡುವುದಕ್ಕೆ ಸಮಸ್ಯೆ ಇಲ್ಲ. ಅದನ್ನು ಮಂಜೂರು ಮಾಡುವುದರಲ್ಲಿ ನಾನು ನಮ್ಮ ಅಧಿಕಾರಿಗಳ ಜೊತೆ ಚರ್ಚಿಸಿ ಅದಕ್ಕೆ ಸೂಕ್ತ ಪರಿಹಾರವನ್ನು ದೊರಕಿಸಿಕೊಡಲಾಗುವುದು.

234 ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ
ಲೋಕೋಪಯೋಗಿ ಸಚಿವರು

ಅ) ಮಂಡ್ಯ ಜಿಲ್ಲೆಯಾದ್ಯಂತ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡಿರುವ ನೂತನ ರಸ್ತೆ ಅಭಿವೃದ್ಧಿ ಕಾರ್ಯಗಳು ಎಷ್ಟು;

ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ರೂ.5337.50 ಲಕ್ಷಗಳ ವೆಚ್ಚದಲ್ಲಿ ಒಟ್ಟು 67 ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ಆ) ಅವುಗಳಿಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು;

ಪ್ರಸಕ್ತ ಸಾಲಿಗೆ ಲೆಕ್ಕಶೀರ್ಷಿಕೆ 5054 ಓಆರ್ಎಫ್ ಅಡಿಯಲ್ಲಿ 54 ಕಾಮಗಾರಿಗಳಿಗೆ ರೂ.1184.50 ಲಕ್ಷಗಳು ಹಾಗೂ ಸಿಆರ್ಎಫ್ ಮತ್ತು ನಬಾರ್ಡ್ ಯೋಜನೆಗಳಡಿಯಲ್ಲಿ 13 ಕಾಮಗಾರಿಗಳಿಗೆ ಒಟ್ಟು ರೂ.1452.50 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.